ಶ್ರೀ ಎ. ಭೀಮಪ್ಪನಾಯಕ್.—ಯಾರೂ ಹಾಗೆ ಹೇಳುವುದಕ್ಕಾಗುವುದಿಲ್ಲ. ಶೇಕಡ ಒಂದರಷ್ಟು ಇದ್ದರೆ ತೆಗೆದುಕೊಳ್ಳಬಹುದು. ನೀತಿಗೆ ಸಂಬಂಧ ಪಟ್ಟದ್ದು ಅದ್ದರಿಂದ enquire ಮಾಡುವುದು ಒಳ್ಳೆಯ ದಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು enquire ಮಾಡುತ್ತೇವೆ. ಮಾನ್ಯ ಸದಸ್ಯರ ತಾಲ್ಲೂಕಿನಲ್ಲಿರುವ ಕೆಲವು projects ಸರಕಾರದ ಗಮನದಲ್ಲಿದೆ.

ಶ್ರೀ ಎ. ಭೀಮಪ್ಪನಾಯಕ್.—ತಾವು ಮರೆನಾಡಿನಲ್ಲಿ 60-80-100 ಇಂಚು ಮಳೆ ಬರುವ ಸ್ಥಳದಲ್ಲಿ ಹುಟ್ಟಿರುವುದರಿಂದ ಈ ವಿಚಾರ ಗೊತ್ತಾಗುವುದಿಲ್ಲ.

Mr. SPEAKER.—This is purely a representation.

ಶ್ರೀ ಎ. ಭೀಮಪ್ಪನಾಯಕ್.—ಇಲ್ಲಿ ನದಿ ಇಲ್ಲ. ಅದ್ದರಿಂದ ಇದನ್ನು ಮಾಡುವುದು ಅವರ ಕರ್ತವ್ಯ ಅಲ್ಲವೇ ?

(ಉತ್ತರವಿಲ್ಲ.)

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಕೆಲವು ತಾಲ್ಲೂಕು ಪ್ರದೇಶಗಳಲ್ಲಿ ಮಳೆ ಇಲ್ಲದ್ದರಿಂದ ಬತ್ತ, ರಾಗಿ ಯಾವ ಬೆಳೆಯೂ ಬೆಳೆಯುತ್ತಾ ಇಲ್ಲ, ಅಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವುಕಡೆ ಕೆರೆಯ ಕೆಳಗೆ ಅಚ್ಚುಕಟ್ಟಿನಲ್ಲಿ ಬತ್ತವನ್ನು ಬೆಳೆಯುತ್ತಾರೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಈ ಪ್ರದೇಶದಲ್ಲಿ ಮಳೆ ಆಗದೇ ಇದ್ದರೆ remission ಕೊಟ್ಟು ಪರಿಹಾರ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಮಳೆ ಆಗದೇ ಇದ್ದರೆ ಏನು remission ಕಾನೂನು ಪ್ರಕಾರ ಕೊಡಬೇಕಾಗುತ್ತದೋ ಅದನ್ನು ಕೊಡುತ್ತೇವೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಪರಿಹಾರ ಕಾರ್ಯಗಳನ್ನು ಕೈಗೊಳ್ಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಕಳೆದ ಎರಡು ವರ್ಷಗಳಲ್ಲಿ ಕ್ಷಾಮ ಪರಿಹಾರ ಕಾರ್ಯಕ್ರಮ ಮಾಡಿದ್ದೇವೆ. ಎಲ್ಲಾ ಸಮಯದಲ್ಲೂ ಪರಿಹಾರಕಾರ್ಯ ಮಾಡಬೇಕು ಎಂದರೆ ಬಹಳ ಕಷ್ಟವಾಗುತ್ತದೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಮಳೆ ಇಲ್ಲದೆ ಇದ್ದಲ್ಲಿ remission ಕೊಡುವ ವಿಚಾರ ಪರಿಶೀಲಿಸುತ್ತೀರಾ ?

Sri Kadidal MANJAPPA.—I want notice.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಮಳೆ ಬೆಳೆ ಇಲ್ಲದೆ ಇದ್ದ ಪ್ರದೇಶದಲ್ಲಿ ಕಂದಾಯವನ್ನು ಕಡ್ಡಾಯವಾಗಿ ವಸೂಲು ಮಾಡುತ್ತಿದ್ದಾರೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—Remission, ಮಾನ್ಯ ಸದಸ್ಯರಿಗೆ ಗೊತ್ತಿದ್ದಹಾಗೆ, ಕಳೆದ ಮೂರು ವರ್ಷಗಳಿಂದಲೂ ಕೊಡುತ್ತಾ ಬಂದಿದ್ದೇವೆ. ಕಳೆದ ವರ್ಷ ಮಳೆ ಆಗದೆ ನಾರ್ಕಾಣಿಯಷ್ಟು ಬೆಳೆ ಆಗದೇ ಇದ್ದರೆ ಮತ್ತು ಆ ರೀತಿ ಶಿಫಾರಸ್ಸು ಬಂದರೆ ಆಗ ಸರಕಾರದವರು ಏನೂ ನಿರಾಕರಿಸುವುದಿಲ್ಲ, ರೆಮಿಷ್ಷ ಕೊಡುತ್ತಾರೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಅಂತಹ ಪ್ರದೇಶದಲ್ಲಿ ಕಂದಾಯ ವಸೂಲು ಮಾಡಬೇಡಿ ಎಂದು ಸೂಚನೆ ಕೊಡುವುದಕ್ಕಾಗುವುದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ general ಆಗಿ ಒಂದು orderನ್ನು ಕೊಡುವುದು ಕಷ್ಟ. Tracts ಮೇಲೆ ಅವಲಂಬಿಸಿದೆ. ಯಾವ ಯಾವ Tractಗಳಲ್ಲಿ ಮಳೆ ಬೆಳೆ ಆಗುವುದಿಲ್ಲವೋ general ಆಗಿ ಕಡ್ಡಾಯವಾಗಿ ವಸೂಲು ಮಾಡಬೇಡಿ ಎನ್ನುವುದಕ್ಕಿಂತ ಶಕ್ತಿ ಇದ್ದವನು ಕೊಡಲಿ, ಶಕ್ತಿ ಇಲ್ಲದೆ ಇದ್ದವನು ಕೊಡುವುದಿಲ್ಲ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಮಳೆ ಬೆಳೆ ಆಗದೇ ಇರುವ ಕಡೆ ಹೀಗೆ ಮಾಡಿ ಎಂದು ಸೂಚನೆ ಕೊಡುವುದಕ್ಕಾಗುವುದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—Revenue Commissioner ಅವರು ಕೆಲವು ಜಿಲ್ಲೆಗಳಲ್ಲಿ ಪ್ರವಾಸಮಾಡಿ general ಆಗಿ ಆ ರೀತಿ ಆದರೆ ಕೊಡವುದು ಅನಾವಶ್ಯಕವೆಂದು ವರದಿಮಾಡಿದ್ದಾರೆ. ಕೆಲವು ಕಡೆಗಳಲ್ಲಿ ರೈತರು ಬರೆದುಕೊಂದರೆ ಅದನ್ನು ಪರಿಶೀಲನೆ ಮಾಡುತ್ತೇವೆ

Amildari List.

Q.—163. Sri B. RACHIAH (Yelandur—Scheduled Castes)—

Will the Government be pleased to state :—

(*a*) the names of officials included in the list prepared for appointment of Amildars with their qualifications, their pay, the date of entry into service and the community they belong;

(*b*) whether this list is final and approved by the Government;

(*c*) the number of them who have already been appointed;

(*d*) the persons who prepared the list and on what basis;

(*e*) whether due representation has been given to Backward and Scheduled Castes which are inadequately represented in the Administrative Services ?

A.—Sri Kadidal MANJAPPA (Minister for Revenue and Public Works).—

(*a*) The finalisation of the list is under consideration of Government.

(*b*) Does not arise—*vide* reply above.

(*c*) 36.

(*d*) The Public Service Commission. The provisional list was prepared on the basis of qualification and representation in service.

(*e*) Yes.

Q.—535. Sri A. MUNIYAPPA (Sidlaghatta-Chikballapur—Scheduled Castes).—

Will the Government be pleased to state :—

(*a*) the persons belonging to the several communities that are included

(SRI A. MUNIYAPPA.)

in the new list of Amildars approved by Government;

(*b*) whether there are persons who are aged more than 40 years in this list and the names of persons which were not included in the Amildari list because they were over forty years of age?

A.—**Sri Kadidal MANJAPPA** (Minister for Revenue and Public Works).—

(*a*) The list is under consideration of Government.

(*b*) Does not arise in view of above reply.

ಶ್ರೀ ಬಿ. ರಾಚಯ್ಯ.—ಈ ಅಮಲ್ದಾರಿ ಲಿಸ್ಟಿನಲ್ಲಿ ಸೇರಿರತಕ್ಕ ನೌಕರರು ಯಾವ ಯಾವ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆಂದು ಹೇಳುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಮಂದಿ ರೆವಿನ್ಯೂ ಇಲಾಖೆಯಲ್ಲಿ, ಇನ್ನು ಕೆಲವರು ಬೇರೆ ಬೇರೆ ಇಲಾಖೆಗಳಲ್ಲಿದ್ದಾರೆ.

ಶ್ರೀ ಬಿ. ರಾಚಯ್ಯ.—ಇದರಲ್ಲಿ 36 ಜನರನ್ನು ಈಗಾಗಲೇ ಕೆಲಸಕ್ಕೆ ತೆಗೆದು ಕೊಂಡಿದೆಯೆಂದು ಹೇಳಿದ್ದೀರಿ. ಅವರಲ್ಲಿ ನಿಮ್ಮ ತರಗತಿಯವರೆಷ್ಟು?

Sri Kadidal MANJAPPA.—I am sure the Hon'ble Member knows. Anyhow, I don't remember the figure. I think it is 3 or 4.

ಶ್ರೀ ಬಿ. ರಾಚಯ್ಯ.—ಕಳೆದ ಸಾರಿ 15 ಜನರನ್ನು ತೆಗೆದುಕೊಂಡಿದ್ದೀರಲ್ಲಾ ಆಗ ಎಷ್ಟು ಜನ ನಿಮ್ಮ ತರಗತಿಯವರನ್ನು ತೆಗೆದುಕೊಂಡಿದ್ದೀರಿ?

Sri Kadidal MANJAPPA.—I am making it clear. When an eligibility list is prepared, it is the duty of Government to give adequate representation to the Schedule Caste candidates. But every time when appointments are made, it is not possible to give representation. These eligibility lists are prepared after taking into consideration the seniority of the officials. So, the Public Service Commission has sent a list now. No final orders have been passed on the list. But we cannot give representation to Depressed Class applicants every time an appointment is made out of the list. In the total list, it is our job to give adequate representation.

ಶ್ರೀ ಬಿ. ರಾಚಯ್ಯ.—16 2/3 ಭಾಗದಷ್ಟು ಪ್ರಮಾಣದಲ್ಲ ಕೊಡಬೇಕೆಂದು ಹೇಳಿದ್ದೀರಿ; ಇದೂ direct recruitment ಅಲ್ಲವೇ?

Sri Kadidal MANJAPPA.—It is not considered as direct recruitment.

ಶ್ರೀ ಬಿ. ರಾಚಯ್ಯ.—ರೆವಿನ್ಯೂ ಇಲಾಖೆಯವರನ್ನು ಮಾತ್ರ ತೆಗೆದುಕೊಂಡಿದರೆ promotional vacancy ಆಗುತ್ತಿತ್ತು. ಅದಕ್ಕೆ ಬದಲು ನಾನಾ ಇಲಾಖೆಗಳಿಂದ ತೆಗೆದುಕೊಂಡಿರುವುದರಿಂದ ಇದು direct recruitment ಎಂದು ಆಗುವುದಿಲ್ಲವೇ?

Sri Kadidal MANJAPPA.—The view of the Public Service Commission is that this is not a direct recruitment; this is promotion.

ಶ್ರೀ ಬಿ. ರಾಚಯ್ಯ.—(*d*) ಭಾಗಕ್ಕೆ ಉತ್ತರವಾಗಿ ಈಗ ಮಾಡಿರತಕ್ಕ ಪಟ್ಟಿಯಲ್ಲಿ ಅವರವರ qualification, ಸರ್ವಿಸ್‌ನಲ್ಲಿ ಆ ಕೋಮಿನವರಿಗಿರತಕ್ಕ ಪ್ರಾತಿನಿಧ್ಯ—ಇವೆರಡನ್ನೂ ಗಮನದಲ್ಲಿಟ್ಟುಕೊಂಡು ಮಾಡಿದ್ದೇವೆಂದು ಹೇಳಿದ್ದೀರಿ. ಅಂದಮೇಲೆ seniority ಪ್ರಶ್ನೆ ಇಲ್ಲಿ ಹೇಗೆ ಬಂತು?

ಶ್ರೀ ಕಡಿದಾಳ್ ಮಂಜಪ್ಪ.—Seniority ಕೂಡ ಇದೆ. But when the Public Service Commission makes the list and when the ranks are fixed, it is on the basis of seniority that the ranks are fixed.

ಶ್ರೀ ಬಿ. ರಾಚಯ್ಯ.—ಯಾವ ಆಧಾರದ ಮೇಲೆ ಈ ಪಟ್ಟಿಯನ್ನು ತಯಾರು ಮಾಡಿದೆಯೆಂದು ಕೇಳಿದ್ದಕ್ಕೆ, "It is prepared on the basis of qualification and representation in Service" ಎಂದು ಹೇಳಿದ್ದೀರಿ. ನೀವು ಹೀಗೆ ಹೇಳಿದ ಮೇಲೆ ಇಲ್ಲಿ ಮುದ್ರಣ ಮಾಡಿರುವ ಉತ್ತರ ಸರಿಯೇ?

ಶ್ರೀ ಕಡಿದಾಳ್ ಮಂಜಪ್ಪ.—ಎರಡೂ ಸರಿಯೇ. ಲಿಸ್ಟ್ ಮಾಡುವಾಗ ಯಾವಯಾವ ಕೋಮಿನವರು, ಅದರಲ್ಲೂ ನಿಮ್ಮ ತರಗತಿಯವರು ಮತ್ತು ಹಿಂದುಳಿದ ಪಂಗಡದವರು ಎಷ್ಟೆಷ್ಟು ಪ್ರಮಾಣದಲ್ಲಿದ್ದಾರೆಂಬುದನ್ನು ಗಮನದಲ್ಲಿಟ್ಟುಕೊಂಡು ಜೊತೆಗೆ ದಕ್ಷತೆ, ಸೀನಿಯಾರಿಟಿಗಳನ್ನು ನೋಡಿ ಪಟ್ಟಿಯನ್ನು ತಯಾರು ಮಾಡಿರುತ್ತಾರೆ. ಆದ್ದರಿಂದ, ನಾನು ಮೊದಲೇ ಹೇಳಿದಹಾಗೆ, ಆ ಲಿಸ್ಟಿನಲ್ಲಿ ಪ್ರಾತಿನಿಧ್ಯವನ್ನು ಕೊಟ್ಟಾಗಿದೆ. ತಾವು ಹೇಳುವುದು, ಆ ಪಟ್ಟಿಯಿಂದ ಪ್ರತಿಯೊಂದು ಸಾರಿಯೂ appointmentಗಳನ್ನು ಮಾಡುವಾಗ ನಿಮ್ಮ ತರಗತಿಯವರಿಗೆ ಪ್ರಾತಿನಿಧ್ಯವನ್ನು ದೊರಕಿಸಿಕೊಡಬೇಕೆಂದು ಹೇಳುತ್ತೀರಿ. ಅದು ಸರಿಯಲ್ಲ.

ಶ್ರೀ ಬಿ. ರಾಚಯ್ಯ.—ಸೀನಿಯಾರಿಟಿ ಎಂದರೆ ತಾವು ನಂಬಿಕೆಯನ್ನು ಗಮನಕ್ಕೆ ತೆಗೆದುಕೊಳ್ಳುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆ ಸೂಕ್ತ ನಿಬಂಧನೆಗಳಿವೆ. ಆ ನಿಬಂಧನೆಗಳ ಪ್ರಕಾರ ಆ ಪಟ್ಟಿಯಲ್ಲಿ ಅದಿಕಾರಿಗಳ Rankನ್ನು ನಿಗದಿಮಾಡುತ್ತಾರೆ. Rank ನಿಗದಿ ಮಾಡುವಾಗ ಸೀನಿಯಾರಿಟಿ ವಿಷಯವೂ ಬರುತ್ತದೆ.

ಶ್ರೀ ಬಿ. ರಾಚಯ್ಯ.—Rank ಗೊತ್ತುಮಾಡುವಾಗ ನಂಬಿಕೆ ಮತ್ತು ಸೀನಿಯಾರಿಟಿಗಳಿಗೆ ವಿರುದ್ಧವಾಗಿ ಏನೂ ಮಾಡಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಬಿ. ರಾಚಯ್ಯ.—ಇಲ್ಲಿ 75 ಜನರ ಒಂದು ಪಟ್ಟಿ ಕೊಟ್ಟಿದೆ. ಅದರಲ್ಲಿ ನಿಮ್ಮ ತರಗತಿಯವರ ಹೆಸರುಗಳೆಲ್ಲಾ ಕೊನೆ ಕೊನೆಗೆ ಹೋಗುತ್ತಿದೆಯೆಂಬುದು ಗೊತ್ತಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ನಾನು ಮೊದಲೇ ಹೇಳಿದಹಾಗೆ, length of serviceನ ಮೇಲೆ ನಿಗದಿ

ಮಾಡಲಾಗಿದೆ. ಅದರಂತೆ ಅವರವರಿಗೆ chance ಬಂದಾಗ ಅವರಿಗೂ ಸಿಕ್ಕುತ್ತದೆ.

ಶ್ರೀ ಬಿ. ರಾಚಯ್ಯ.—ಬೇರೆ ಬೇರೆ ಇಲಾಖೆಯಲ್ಲಿ ಕೆಲಸ ಮಾಡಿರುವವರನ್ನು ಪಟ್ಟಿಯಲ್ಲಿ ಸೇರಿಸುವುದರಲ್ಲಿ ರೆವಿನ್ಯೂ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದವರಿಗೆ ಅನ್ಯಾಯವಾಗಿದೆಯೆಂದು ಹೇಳಬಹುದಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ರೆವಿನ್ಯೂ ಇಲಾಖೆಯವರೇ ಬಹಳ ಮಂದಿ, ಬೇರೆ ಇಲಾಖೆಯವರು ಕೆಲವು ಮಂದಿ ಮಾತ್ರ ಇದ್ದರು.

ಶ್ರೀ ಬಿ. ರಾಚಯ್ಯ.—ಕಳೆದ ಅಸೆಂಬ್ಲಿಯಲ್ಲಿ ಪಾಸ್ ಆದ ನಿರ್ಣಯವನ್ನು ಕಾರ್ಯಗತ ಮಾಡುವುದಕ್ಕೆ ಸರ್ಕಾರದವರು ಏನು ಕಾರ್ಯಕ್ರಮ ಕೈಕೊಂಡಿದ್ದಾರೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಗಮನದಲ್ಲಿಟ್ಟುಕೊಂಡೇ ಈ ಪಟ್ಟಿಯನ್ನು ತಯಾರುಮಾಡಿದೆ.

ಶ್ರೀ ಎ. ಮುನಿಯಪ್ಪ.—ಇಲ್ಲಿ ಪಟ್ಟಿ ಮಾಡಿರುವುದರಲ್ಲಿ 40 ವರ್ಷಕ್ಕೆ ಮೇಲ್ಪಟ್ಟಿರುವವರು ಎಷ್ಟು ಜನ ಇದ್ದಾರೆ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಎ. ಮುನಿಯಪ್ಪ.—ಪಟ್ಟಿ ಮಾಡುವಾಗ ದಕ್ಷತೆ ಮತ್ತು ಕೆಲಸಕಾರ್ಯಗಳನ್ನು ಗಮನಕ್ಕೆ ತೆಗೆದುಕೊಳ್ಳುತ್ತೀರಾ ಅಥವಾ ವಯಸ್ಸಿನ ಆಧಾರದ ಮೇರೆ ಪಟ್ಟಿ ತಯಾರಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲಸಕಾರ್ಯಗಳ ವಿಚಾರದಲ್ಲಿ ಅವರ ದಕ್ಷತೆಯೇ ಅಲ್ಲದೆ ಇತರ ವಿಷಯಗಳನ್ನೂ ಗಮನಕ್ಕೆ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ರಾಚಯ್ಯ.—ಹಿಂದೆ ಅಮಲ್ದಾರರನ್ನು ನೇಮಕ ಮಾಡುವಾಗ 40 ವರ್ಷಕ್ಕೆ ಮೇಲ್ಪಟ್ಟವರನ್ನೂ ನೇಮಕ ಮಾಡಿದ್ದರೆಂಬುದು ಗೊತ್ತಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಹಿಂದೆ ನೇಮಿಸಿರುವುದರಲ್ಲಿ 40 ವರ್ಷಕ್ಕೆ ಮೇಲ್ಪಟ್ಟವರ ವಿಷಯದಲ್ಲಿ ಅವರ ವಯಸ್ಸಿಗೆ ವಿನಾಯಿತಿ ಕೊಡಲಾಗಿದೆ.

ಶ್ರೀ ಬಿ. ರಾಚಯ್ಯ.—ಈಗಲೂ ಹಾಗೆಯೇ ವಿನಾಯಿತಿ ಕೊಟ್ಟು ಸೇರಿಸಿಕೊಳ್ಳುವುದಕ್ಕಾಗುವುದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಲಿಸ್ಟಿನಲ್ಲಿ ಇಲ್ಲದಿರುವವರನ್ನು ಸೇರಿಸಿಕೊಳ್ಳುವುದು ಕಷ್ಟ.

ಶ್ರೀ ಡಿ. ಆರ್. ಕರಿಗೌಡ.—ಅಮಲ್ದಾರಿ ಲಿಸ್ಟಿನಲ್ಲಿ ಸೇರಿಸಬೇಕಾದರೆ ಏನೇನು ಅರ್ಹತೆಗಳಿರಬೇಕು ?

ಶ್ರೀ ಕಡಿದಾಳ್ ಮಂಜಪ್ಪ.—ದೇಹದಾರ್ಢ್ಯ ಚೆನ್ನಾಗಿರಬೇಕು ; ಮತ್ತು ಕೆಲಸ ಮಾಡಲು ಉತ್ಸಾಹ ವಿರಬೇಕು.

ಶ್ರೀ ಡಿ. ಆರ್. ಕರಿಗೌಡ.—ಅದಕ್ಕಾಗಿಯೇ ಅಲ್ಲವೇ 40 ವರ್ಷಕ್ಕೆ ಮೇಲ್ಪಟ್ಟಿರುವವರನ್ನು ಸೇರಿಸಕೂಡದೆಂದಿರುವುದು ?

ಶ್ರೀ ಕಡಿದಾಳ್ ಮಂಜಪ್ಪ.—ಪಟ್ಟಿಯಲ್ಲಿ ಸೇರಿಸುವಾಗ 40 ವರ್ಷಕ್ಕೆ ಮೇಲ್ಪಟ್ಟಿರಕೂಡದೆಂದಿದೆ.

ಶ್ರೀ ಡಿ. ಆರ್. ಕರಿಗೌಡ.—ರೂಲ್ಸಿನಲ್ಲಿ 45ರ ಮೇಲೆ ವಯಸ್ಸಾದವರು ಇರಲೇ ಕೂಡದೆಂದೇ ಹೇಳಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅಷ್ಟು ನಿರ್ಧರವಾಗಿ ಹೇಳಲಾರೆ ; ರೂಲ್ಸ್ ನೋಡಬೇಕು.

ಶ್ರೀ ಬಿ. ಎಸ್. ಜೋರಣ್ಣಗೌಡ.—ಈಗ 40 ವರ್ಷಕ್ಕೆ ಮೇಲ್ಪಟ್ಟವರು ಯಾರೂ ಇಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಇದ್ದಾರೆ. ಹಿಂದೆ ಸರ್ಕಾರದವರು ಮಾಡಿದ್ದ ಒಂದು ಲಿಸ್ಟಿನಲ್ಲಿ ಇದ್ದಾರೆ.

ಶ್ರೀ ಬಿ. ಎಸ್. ಜೋರಣ್ಣಗೌಡ.—ಅಂಥವರನ್ನು ಲಿಸ್ಟಿನಿಂದ ವಜಾ ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ವಜಾ ಮಾಡುವುದಕ್ಕಾಗುವುದಿಲ್ಲ. ಅವರನ್ನು ಹಿಂದೆಯೇ ಲಿಸ್ಟಿನಲ್ಲಿ ಸೇರಿಸಿತ್ತು.

ಶ್ರೀ ಟಿ. ಹನುಮಯ್ಯ.—Qualification ಮತ್ತು ದಕ್ಷತೆ ಇರುವವರನ್ನು ತೆಗೆದುಕೊಳ್ಳುತ್ತೀರೆಂದು ಹೇಳಿದಿರಿ. ದಕ್ಷತೆಯನ್ನು test ಮಾಡುವವರು ಯಾರು ?

ಶ್ರೀ ಕಡಿದಾಳ್ ಮಂಜಪ್ಪ.—ಪಬ್ಲಿಕ್ ಸರ್ವಿಸ್ ಕಮಿಷನರು.

ಶ್ರೀ ಟಿ. ಹನುಮಯ್ಯ.—ಯಾವಯಾವ ಆಧಾರದ ಮೇಲೆ ಅವರು ಇದನ್ನು ನಿಗದಿ ಮಾಡುತ್ತಾರೆ ?

ಶ್ರೀ ಕಡಿದಾಳ್ ಮಂಜಪ್ಪ.—Confidential Reportಗಳು ಮತ್ತು ಅವರ ಕೆಲಸದ ವಿಚಾರದಲ್ಲಿ ರೆವಿನ್ಯೂ ಕಮಿಷನರ ಅಭಿಪ್ರಾಯ, ಮತ್ತು interview ಮಾಡುವ ಕಾಲದಲ್ಲಿ ಅವರ performance ಯಾವ ರೀತಿ ಇತ್ತು, ಇವೆಲ್ಲವನ್ನೂ ಗಮನಕ್ಕೆ ತೆಗೆದುಕೊಂಡು ತೀರ್ಮಾನಿಸುತ್ತಾರೆ.

ಶ್ರೀ ಟಿ. ಹನುಮಯ್ಯ.—ಹಾಲಿ ನೇಮಕವಾಗಿರತಕ್ಕ ಅಮಲ್ದಾರರ ವಿಚಾರದಲ್ಲಿ ಅವರ ದಕ್ಷತೆಯನ್ನು ಪರಿಶೀಲನೆ ಮಾಡಲಾಗಿದೆಯೇ ?

Sri Kadidal MANJAPPA.—That question does not arise.

ಶ್ರೀ ಜೆ. ಮಹಮ್ಮದ್ ಇಮಾಂ.—ಪಬ್ಲಿಕ್ ಸರ್ವಿಸ್ ಕಮಿಷನ್ನಿನವರು ತಯಾರಿಸಿದ ಆ ಅಮಲ್ದಾರಿ ಲಿಸ್ಟ್ ಎಷ್ಟು ಸಾರ್ತಿ ಬದಲಾವಣೆಯಾಯಿತು ?

ಶ್ರೀ ಕಡಿದಾಳ್ ಮಂಜಪ್ಪ.—ಒಂದೇ ಸಲ ; ನಾವು ಆ ಲಿಸ್ಟನ್ನು ಅವರಿಗೆ ಕಳುಹಿಸಿದ್ದುದೂ ಒಂದೇ ಆವರ್ತಿ.

ಶ್ರೀ ಜೆ. ಮಹಮ್ಮದ್ ಇಮಾಂ.—ಈಗ ಕಳೆದ 5-6 ವರ್ಷಗಳಿಂದಲೂ ಈ ಲಿಸ್ಟ್ 3-4 ಆವರ್ತಿ ಬದಲಾವಣೆಯಾಗಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—1950ರಲ್ಲಿ ಒಂದು ಅಮಲ್ದಾರಿ ಲಿಸ್ಟನ್ನು ತಯಾರಿಸಿದ್ದರು. ಆದರೆ ಆ ಲಿಸ್ಟ್ P.S.C. ನವರ ಪರಿಶೀಲನೆಗೆ ಹೋಗಿರಲಿಲ್ಲ. ಆ ಲಿಸ್ಟನ್ನೂ ನಾವೀಗ P.S.C. ಅವರಿಗೆ ಕಳುಹಿಸಿಕೊಟ್ಟಿದ್ದೇವೆ. ಅವರು ಆ ಲಿಸ್ಟನ್ನು ರಿವೈಜ್‌ಮಾಡಿ ನಮಗೆ ವಾಪಸ್ಸು ಕಳುಹಿಸಿಕೊಟ್ಟಿದ್ದಾರೆ. ಆ ಲಿಸ್ಟಿನ ವಿಚಾರದಲ್ಲಿ ಇನ್ನೂ ಆಬ್ಜೆರು ತೀರ್ಮಾನಕ್ಕೆ ಬಂದಿಲ್ಲ.

ಶ್ರೀ ಜೆ. ಮಹಮ್ಮದ್ ಇಮಾಂ.—ಹಾಗೆ ಆದು ಫೈನಲೈಜ್ ಆಗದೆ ಇದ್ದರೆ ನೀವು ಹೀಗೆ ಈ 36 ಜನರನ್ನು ಕೆಲಸಕ್ಕೆ ಆಗಲೇ ತೆಗೆದುಕೊಂಡಿದ್ದೀರಲ್ಲ ಹೇಗೆ ?

Sri Kadidal MANJAPPA.—They have been appointed on temporary basis.

ಶ್ರೀ ಜೆ. ಮಹಮ್ಮದ್ ಇಮಾಂ.—ಹಾಗೆ ಆ ಲಿಸ್ಟನ್ನೂ ಫೈನಲೈಜ್ ಆಗದೆ ಇರುವಾಗ ಈ ಸೀನಿಯಾರಿಟಿ ಪ್ರಶ್ನೆಯನ್ನು ತಾವು ಹೇಗೆ ನಿರ್ಧಾರಮಾಡುತ್ತೀರಿ ? Even before the list is finalised, before the candidates are finalised, how is it that you appointed 36 persons, on what basis ?

Sri Kadidal MANJAPPA.—On temporary basis.

ಶ್ರೀ ಜೆ. ಮಹಮ್ಮದ್ ಇಮಾಂ.—ಆ ಲಿಸ್ಟ್ ಫೈನಲೈಜ್ ಆದಮೇಲಲ್ಲವೇ ತಾವು ಈ ಸೀನಿಯಾರಿಟಿಯನ್ನು ನಿರ್ಧರಿಸಬೇಕಾದುದು ?

ಶ್ರೀ ಕಡಿದಾಳ್ ಮಂಜಪ್ಪ.—ಈಗ P.S.C. ಅವರಿಂದ ಫೈನಲೈಜ್ ಆಗಿ ಬಂದಿರತಕ್ಕಂಥ ಲಸ್ಟ್‌ನಲ್ಲಿ ಅವರು ಒಂದು ರೀತಿಯಾಗಿ ಈ ಸೀನಿಯಾರಿಟಿಯನ್ನು ಫಿಕ್ಸ್‌ಅಪ್ ಮಾಡಿದ್ದಾರೆ. ಹಾಗೆ ಅವರು ಫಿಕ್ಸ್‌ಅಪ್ ಮಾಡಿರತಕ್ಕದ್ದರ ಮೇರೆಗೆ ನಾವೀಗ ಈ ಜನರನ್ನು ಹಂಗಾಮಿಯಾಗಿ ಕೆಲಸಕ್ಕೆ ನೇಮಿಸಿಕೊಂಡಿದ್ದೇವೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಹಾಗೆ ಆ ಲಸ್ಟ್ P.S.C. ಅವರಿಂದ ಪರಿಶೀಲನೆಯಾಗಿ ಬಂದಿದಾಗ್ಯೂ ತಾವೇಕೆ ಇದುವರೆಗೂ ಆ ಫೈಲನ್ನು ಇನ್ನೂ ಪೂರ್ತಿ ಮಾಡಿಲ್ಲ?

Sri Kadidal MANJAPPA.—It is under the active consideration of the Government.

ಶ್ರೀ ಜೆ. ಮಹಮ್ಮದ್ ಇಮಾಂ.—ಈಗ ತಾವು ಕೆಲಸಕ್ಕೆ ನೇಮಿಸಿಕೊಂಡಿರತಕ್ಕಂಥವರನ್ನು P.S.C. ಅವರು ನಿರ್ಧರಿಸಿರತಕ್ಕ ನಿಯಮಕ್ಕನುಸಾರವಾಗಿ ಅಪಾಯಿಂಟ್ ಮಾಡಿದ್ದೀರೋ ಅಥವಾ ಆ ನಿಯಮವನ್ನು ಬದಲಾವಣೆ ಮಾಡಿ ಅಪಾಯಿಂಟ್ ಮಾಡಿದ್ದೀರೋ?

ಶ್ರೀ ಕಡಿದಾಳ್ ಮಂಜಪ್ಪ.—ಈಗ P.S.C. ಅವರೇನು ಒಂದು ರ್ಯಾಂಕ್ ಮತ್ತು ಸೀನಿಯಾರಿಟಿಯನ್ನು ಫಿಕ್ಸ್‌ಅಪ್ ಮಾಡಿದ್ದಾರೋ ಅದರ ಪ್ರಕಾರವೇ ಅಪಾಯಿಂಟ್ ಮಾಡಿದ್ದೇವೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಹಾಗಾದರೆ ಈಗ ತಾವು ಇಲ್ಲ ಅವರ ಹೆಸರು, ರ್ಯಾಂಕ್ ಮತ್ತು ಡೆಸಿಗ್ನೇಷನ್ ಇತ್ಯಾದಿಗಳನ್ನೆಲ್ಲಾ ಏಕೆ ಕೊಟ್ಟಿಲ್ಲ?

Why have you not given the names as desired by Sri Rachiah?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಆ ಲಸ್ಟು P.S.C. ಅವರಿಂದ ಮಾತ್ರ ಫೈನಲೈಜಾಗಿದೆ. ಸರ್ಕಾರದವರು ಅದನ್ನು ಫೈನಲೈಜ್ ಮಾಡಿಲ್ಲ. ಆದಕಾರಣ ಈಗ ಸದ್ಯಕ್ಕೆ ಆ ಹೆಸರು ಇತ್ಯಾದಿ ವಿವರಗಳನ್ನು ಕೊಟ್ಟಿಲ್ಲ.

ಶ್ರೀ ಜೆ. ಮಹಮ್ಮದ್ ಇಮಾಂ.—ಏನೇ ಆಗಲಿ ತಾವು ಆ ವಿವರಗಳನ್ನೆಲ್ಲಾ ಏಕೆ ಈ ಸಭೆಗೆ ಈಗ ತಿಳಿಸಬಾರದು?

Sri Kadidal MANJAPPA.—We had to consider the proposals of the Public Service Commission. It took time. We were in need of Amildars urgently. We appointed them on temporary basis.

Sri J. MOHAMED IMAM.—So it is a question of convenience to Government. ಹೀಗೆ ತಮಗೆ ಬೇಕಾದವರಿಗೆ ಮಾತ್ರ ಕೆಲಸಗಳನ್ನು ಕೊಡುವುದು, ಬೇಡವಾದವರಿಗೆ ಹಿಂದಕ್ಕೆ ತಳ್ಳುವುದು; ಇದೇನೋ ನಿಮ್ಮ ಪಾಲಿಸಿ?

ಶ್ರೀ ಕಡಿದಾಳ್ ಮಂಜಪ್ಪ.—ಆ ರೀತಿಯೇನೂ ಆಗಿಲ್ಲ.

ಶ್ರೀ ಜೆ. ಮಹಮ್ಮದ್ ಇಮಾಂ.—'ಆ ರೀತಿಯಾಗಿಲ್ಲ' ಅಂದರೆ ಇದನ್ನು ತಾವು ಮತ್ತೆ ಯಾವ ರೂಲ್ಸು-ನಿಬಂಧನೆಗಳ ಪ್ರಕಾರ ಮಾಡಿದ್ದೀರಿ? What are the rules followed in this respect?

Sri Kadidal MANJAPPA.—They have taken into account the existing rules; they have taken into account the representation of the Backward Classes and the representation of the Scheduled Classes and the efficiency of the man.

Sri J. MOHAMED IMAM.—Is it not a fact that there are complaints, that the Public Service Commission and others are mainly guided by communal considerations and not by merit and that minor communities are hopelessly ignored?

Sri Kadidal MANJAPPA.—Certainly not.

Sri J. MOHAMED IMAM.—To satisfy ourselves, ತಾವು ಈಗ ತಯಾರು ಮಾಡಿರುವ ಲಸ್ಟನ್ನು ಈ ಸಭೆಯ ಮುಂದೆ ಇಡುತ್ತೀರಾ?

Sri Kadidal MANJAPPA.—I will consider the suggestion. The Government have not yet taken a decision on the proposals sent by the Public Service Commission; the list is not yet approved by the Government.

ಶ್ರೀ ಜೆ. ಮಹಮ್ಮದ್ ಇಮಾಂ.—ಈಗ P.S.C. ಅವರಿಂದ ಬಂದಿರತಕ್ಕಂಥ ಲಸ್ಟ್ ಒಂದು ಕೋಮಿನವರ ಬಗ್ಗೆ ತಯಾರಿಸಿರುವಂಥ ಲಸ್ಟ್ ಹೌದೋ ಅಲ್ಲವೋ ಅನ್ನುವುದನ್ನು ಪರಿಶೀಲನತಕ್ಕ ಬಗ್ಗೆ ಈ ಸಭೆಯಮುಂದೆ ಇಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ರೂಲ್ಸ್ ಅಲೋ ಮಾಡಿದರೆ ಇಡುತ್ತೇವೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಆ P.S.C. ಅವರ ಲಸ್ಟನ್ನು ತಾವು ಈ ಸಭೆಯಮುಂದೆ ಇಡಬಹುದು. ಈ ಹಿಂದೆಲ್ಲಾ ಎಷ್ಟೋಸಾರ್ತಿ ಹಾಗೆ ಇಟ್ಟಿದ್ದಾರೆ. ಹಿಂದಿನ ದಾಖಲೆಗಳನ್ನು ತಾವು ಬೇಕಾಗಿದ್ದರೆ ತೆಗಿಸಿನೋಡಿ.

ಶ್ರೀ ಕಡಿದಾಳ್ ಮಂಜಪ್ಪ.—ಆಗಲಿ ನೋಡೋಣ.

ಶ್ರೀ ಎ. ಭೀಮಪ್ಪ ನಾಯಕ್.—ಈ ಹಿಂದೆ ತಯಾರಿಸಿದ್ದಂಥ ಲಸ್ಟಿನಲ್ಲಿದ್ದ ಕೆಲವರ ಹೆಸರುಗಳನ್ನು ಈಚೆಗೆ ತಯಾರಿಸಿರತಕ್ಕಂಥ ಲಸ್ಟಿನಲ್ಲಿ ಬಿಟ್ಟುಬಿಡಲಾಗಿದೆಯಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು. ಕೆಲವರನ್ನು ಬಿಟ್ಟುಬಿಡಲಾಗಿದೆ.

ಶ್ರೀ ಎ. ಭೀಮಪ್ಪ ನಾಯಕ್.—ಏಕೆ?

ಶ್ರೀ ಕಡಿದಾಳ್ ಮಂಜಪ್ಪ.—ಅವರಲ್ಲಿ ದಕ್ಷತೆಯಿರಲಿಲ್ಲ ಎಂದು.

ಶ್ರೀ ಎ. ಭೀಮಪ್ಪ ನಾಯಕ್.—ಹಾಗಾದರೆ ಇತ್ತೀಚೆಗೆ ಅವರ ನಡತೆಯಲ್ಲಾಗಲಿ ಅಥವಾ ಅವರ ಕಾರ್ಯಕಲಾಪಗಳಲ್ಲಿಯಾಗಲಿ ಏನಾದರೂ ದೋಷ ದೋಷಗಳಿರುತ್ತವೆಂದು ತಮಗೆ ಯಾರಿಂದಲಾದರೂ ವರದಿಗಳು ಬಂದಿರುತ್ತವೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ನಮಗೆ ಆ P.S.C. ಅವರಿಂದ ಬಂದಿರತಕ್ಕಂಥ ವರದಿಯಲ್ಲಿ ಕೆಲವರು ಅಷ್ಟು ದಕ್ಷರಾಗಿಲ್ಲವೆಂದು ಅವರು ತಿಳಿಸಿದ್ದಾರೆ. ಆದುದರಿಂದ ಇತ್ತೀಚೆಗೆ ತಯಾರಿಸಿರತಕ್ಕ ಪಟ್ಟಿಯಲ್ಲಿ ಕೆಲವರ ಹೆಸರುಗಳನ್ನು ಕೈಬಿಡಲಾಗಿದೆ. ಈಗ ತಾವು ಪ್ರಾಸಂಗಿಕವಾಗಿ ಕೇಳುತ್ತಿರುವುದರಿಂದ ಅಂಥ ಅರ್ಹತೆಯುಳ್ಳವರ ಹೆಸರೇನಾದರೂ ಕೈಬಿಟ್ಟಿದ್ದಲ್ಲಿ—ಅದನ್ನು ತಾವು ನನಗೆ ತಿಳಿಸಿದರೆ ನಾವು ಅದನ್ನು ಪುನಃ ಪರಿಶೀಲನೆ ಮಾಡುವುದಕ್ಕೆ ಸಿದ್ಧರಾಗಿದ್ದೇವೆ.

ಶ್ರೀ ಎ. ಭೀಮಪ್ಪ ನಾಯಕ್.—ಕೆಲವು ಪೇಳೆ ಕೆಲವು ಇಲಾಖೆಗಳಲ್ಲಿ ತಮಗೆ ಬೇಕಾದವರಿಲ್ಲದಿದ್ದರೆ ಆಗ ಅಂಥ ಇಲಾಖೆಯವರಿಗೆ ಈ ಅಮಲ್ದಾರಿ ಧಾರ್ಷ್ಟ್ಯವನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಿರುವುದು, ತಮಗೆ ಬೇಕಾದವರಿದ್ದಾಗ ಆ ಇಲಾಖೆಗಳಿಗೂ ಆವ ಕಾಶ ಕೊಡೋಣ ಎಂದು ಹೇಳುತ್ತಿರುವುದು, ಇದೇ ನೇನು ನಿಮ್ಮ ಆ ಸರಿಯಾದ ನೀತಿ?

ಶ್ರೀ ಕಡಿದಾಳ್ ಮಂಜಪ್ಪ.—ಈಗ P.S.C. ಅವರು ಮಾಡಿರತಕ್ಕದ್ದು ಸರಿಯಾಗಿದೆ. ಆದರೂ ಅದನ್ನು ಪುನಃ ಪರಿಶೀಲನೆ ಮಾಡೋಣ. ಹಾಗೊಂದು ವೇಳೆ ನಾವು ಈಗ P.S.C. ಅವರು ಮಾಡಿರತಕ್ಕ ತೀರ್ಮಾನಕ್ಕೆ ವ್ಯತಿರಿಕ್ತವಾಗಿ ತೀರ್ಮಾನ ಮಾಡಿದರೆ ನಾವು ಆ ಬಗ್ಗೆ ಈ ಸಭೆಯ ಮುಂದೆ ನಮ್ಮ ಸಮಜಾ ಯಿಷೆ ಕೊಡಬೇಕಾಗಿರುತ್ತದೆ ಎಂಬ ಅಂಶ ತಮಗೆಲ್ಲ ರಿಗೂ ತಿಳಿದೇ ಇದೆ. ಆ ರೀತಿ ಏನಾದರೂ ಆಗಿದ್ದರೆ ಅದನ್ನು ಮತ್ತೊಮ್ಮೆ ಪರಿಶೀಲನೆಮಾಡಿ ನೋಡೋಣ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈ ಸಭೆಯವರು ಈ ಬಗ್ಗೆ ಒಂದು ತೀರ್ಮಾನ ಕೊಟ್ಟಮೇಲೆ ಅದನ್ನು ಕಡ್ಡಾಯವಾಗಿ ಪರಿಪಾಲನತಕ್ಕದ್ದು ಸರ್ಕಾರದವರ ಕರ್ತವ್ಯವಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈಗ ಅವರು ತೀರ್ಮಾನ ಮಾಡಿರತಕ್ಕ ಲಿಸ್ಟ್ ಈ ಸಭೆಯವರು ಕೊಟ್ಟಿರತಕ್ಕ ತೀರ್ಮಾನಕ್ಕೆ ಅನುಗುಣವಾಗಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರದವರಿನ್ನೂ ಆ ಲಿಸ್ಟನ್ನು ಆಖೈರಾಗಿ ತೀರ್ಮಾನ ಮಾಡಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಆ ಆಖೈರು ತೀರ್ಮಾನದ ಬಗ್ಗೆ ಮಹಾಜನರ ಅಭಿಪ್ರಾಯವೇನಿರು ತ್ತದೆಯೆಂಬ ಬಗ್ಗೆ ಈ ಸಭೆಯವರು ಅದನ್ನು ವ್ಯಕ್ತಪಡಿ ಸಿರುವಾಗ ಆ ತೀರ್ಮಾನಕ್ಕೆ ಅನುಸಾರವಾಗಿ ಅದನ್ನು ಕಡ್ಡಾಯವಾಗಿ ನಿರ್ವಹಣೆ ಮಾಡಬೇಕಾದದ್ದು ಸರ್ಕಾ ರದವರ ಕರ್ತವ್ಯವಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಆ ಬಗ್ಗೆ ಸರ್ಕಾರದ ವರಿನ್ನೂ ಆಖೈರು ತೀರ್ಮಾನ ತೆಗೆದುಕೊಂಡಿಲ್ಲವೆಂದು ನಾನು ಆಗಲೇ ಹೇಳಿದೆನು.

ಶ್ರೀ ಎಂ. ಚಿಕ್ಕಲಿಂಗಯ್ಯ.—1945ನೆಯ ಸರ್ಕಾರಿ ಆರ್ಡರ್ ಪ್ರಕಾರ ತಾವು ಕೆಲವರನ್ನು ಅಮಲ್ದಾರರ ಕೆಲಸಕ್ಕೆ 1949ರಲ್ಲಿ ತೆಗೆದುಕೊಳ್ಳಲಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಆಗ ಈ ಕೆಲಸಕ್ಕಾಗಿ ಒಂದು ಸಮಿತಿಯನ್ನು ನೇಮಿಸಲಾಗಿದ್ದಿತೇ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು, ನೇಮಿಸ ಲಾಗಿತ್ತು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಆ ಸಮಿತಿಯಲ್ಲಿ ಯಾರು ಯಾರು ಮೆಂಬರುಗಳಿದ್ದರು?

ಶ್ರೀ ಕಡಿದಾಳ್ ಮಂಜಪ್ಪ.—ಆಗಿದ್ದ ರೆವಿನ್ಯೂ ಕಮಿಷನರು; ಆಗಿದ್ದ P.S.C. ಅಧ್ಯಕ್ಷರು, ಎಜು ಕೇಷನ್ ಬ್ರಾಂಚಿನ ಸೆಕ್ರೆಟರಿಗಳು; ಮತ್ತು ಡೆವಲಪ್ ಮೆಂಟ್ ಬ್ರಾಂಚಿನ ಸೆಕ್ರೆಟರಿಗಳಾಗಿದ್ದ ಶ್ರೀ ಪಾರ್ಥ ಸಾರಥಿಯವರು ಇಷ್ಟು ಜನಗಳಿದ್ದರು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈಗ P.S.C. ಅವರು ಯಾರನ್ನು ಕೆಲವರು ದಕ್ಷರಲ್ಲವೆಂದು ಅವರನ್ನು ಪಟ್ಟಿಯಿಂದ ತೆಗೆದುಬಿಡಬಹುದೆಂದು ಹೇಳಿ ದ್ದಾರೋ ಅಂಥವರನ್ನೆಲ್ಲಾ ದಕ್ಷರೆಂದು ಹೇಳಿ ಈಗ ಆ P.S.C. ಮಂಡಳಿಯಲ್ಲಿರತಕ್ಕಂಥ ಸದಸ್ಯರು ಈಗ ಕೈಬಿಟ್ಟಿರತಕ್ಕವರನ್ನೆಲ್ಲಾ ಆ ಹಿಂದಿನ ಪಟ್ಟಿಯಲ್ಲಿ ಸೇರಿ ದ್ದಾರಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೊಂದುವೇಳೆ ಯಾರನ್ನೇ ಆಗಲಿ ಆ ಪಟ್ಟಿಯಲ್ಲಿ ಸೇರಿಸಿದ್ದ ಮಾತ್ರಕ್ಕೇ ಅವರಿಗೆ ಅಮಲ್ದಾರಿಯನ್ನೇ ಆಗಲಿ ಅಥವಾ ಅವರನ್ನು ಅಸಿಸ್ಟೆಂಟ್ ಕಮಿಷನರನ್ನಾಗಿಯೇ ಆಗಲಿ ಮಾಡಲೇ ಬೇಕೆಂಬ ನಿರ್ಬಂಧವೇನೂ ಇಲ್ಲ. ಹಾಗೆ ಯಾರಾ ರಲ್ಲಿ ದಕ್ಷತೆ ಇರುವುದಿಲ್ಲವೆಂದು ತಿಳಿದುಬರುತ್ತದೆಯೋ ಅಂಥವರನ್ನು ಕೈಬಿಟ್ಟುಬಿಡಬಹುದು. ಹಾಗೆ ಅವರು ದಕ್ಷರಲ್ಲ ಎಂದು ತಿಳಿದುಬಂದಮೇಲೂ ಅವರಿಗೆ ಭಡ್ತಿ ಕೊಡಬೇಕೆಂಬ ನಿರ್ಬಂಧವೇನೂ ಇಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಹಾಗೆ ಈ ದಿವಸ ತಾವು ಕೆಲವರನ್ನು ಕೈಬಿಡುವುದಕ್ಕೆ ಕಾರಣವೇನು?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಅವರ ಪರ್ ಫಾರಮೆನ್ಸ್ ಸರಿಯಾಗಿಲ್ಲ ಎಂದು.

ಶ್ರೀ ಎಂ. ಚಿಕ್ಕಲಿಂಗಯ್ಯ.—ತಾವು ಈ ಹಿಂದೆ 1949ರಲ್ಲಿ ಕೆಲವರನ್ನು ಅಪಾಯಿಂಟ್ ಮಾಡಿ ಕೊಂಡದ್ದು 1939ರ ಆರ್ಡರ್ ಪ್ರಕಾರವೋ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರಿ ಆಜ್ಞೆಗಳ ಪ್ರಕಾರವೇ ಮಾಡಿಕೊಂಡಿದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈಗ ಜಾರಿಯಲ್ಲಿರು ವುದೂ ಕೂಡ ಆ 1939ರ ಆರ್ಡರೇ ತಾನೆ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

Sri R. CHENNIGARAMIAH.—You were pleased to say just now that the list prepared by the Committee in the year 1949 has been referred to the Public Service Commission and they have made some changes. Is it a fact that the list was approved by the Government then?

Sri Kadidal MANJAPPA.—That list has been approved by the Government. In addition to that list, they had added 30 or 40 names without consulting the Public Service Commission. The list approved by the Government was referred to the Public Service Commission. There was a complaint that the representation of other candidates has not been taken into account at that time. Therefore, it was thought desirable to refer the whole matter to the Public Service Commission.

9 A.M.

Sri R. CHENNIGARAMIAH.—Is it desirable to refer the list approved by the Government to the Public Service Commission? Is there any sanctity for the Government Order?

Sri Kadidal MANJAPPA.—There is nothing wrong in it.

Amildari list prepared by the P.S.C.

Q.—329. **Sri R. ANANTARAMAN** (Chamarajapet).—

Will the Government be pleased to state :—